ಕೌನ್ಸಿಲ್‌ಗೆ ಹೋಗಬಹುದು ತಾವು ಹೋಗುವುದರೊಳಗೆ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಬೇಕೆಂದಿದ್ದಾರೆ. ಈಶ್ವರಪ್ಪನವರು ಏನೋ ಕೇಳಬೇಕೆಂದು ಇದ್ದಾರೆ. ಸ್ವಲ್ಪಹೊತ್ತು ಇರುತ್ತೀರಿ ತಾನೇ ?

ಶ್ರೀ ಜೆ. ಹೆಚ್. ಪಟೇಲ್ : ಆಯಿತು.

(ಈ) ಕ್ರೀಡಾಪಟುಗಳಿಗೆ ಪ್ರೋತ್ಸಾಹ ಧನ ನೀಡುವುದು

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಇಡೀ ಪ್ರಪಂಚದಲ್ಲಿ ತುಂಬಾ ಸಂತೋಷ ಪಡುವಂತಹ ಭಾರತದ ಒಬ್ಬರು ಕ್ರೀಡಾಪಟು ಎಸ್. ಎನ್. ಪುಷ್ಪ ಎನ್ನುವಂತಹ ಕ್ರೀಡಾಪಟು ಕಿಕ್‌ಬಾಕ್ಸ್ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿದಂತಹ ಒಬ್ಬ ಏಕೈಕ ಮಹಿಳೆ. ಕರ್ನಾಟಕ ರಾಜ್ಯದಿಂದ ಒಬ್ಬಳೇ ಹೋದಳು. ಭಾರತ ದೇಶವನ್ನು ರೆಪ್ರಸೆಂಟ್ ಮಾಡಿ ಪ್ರಪಂಚದ ಒಂದು ಕ್ರೀಡಾಕೂಟದ ಸ್ಪರ್ಧೆಯಲ್ಲಿ ಬಾಂಕಾಕ್‌ನಲ್ಲಿ ನಡೆದಂತಹ ಒಂದು ಸ್ಪರ್ಧೆಯಲ್ಲಿ ಕಿಕ್‌ಬಾಕ್ಸ್‌ನ ಸ್ಪರ್ಧೆಯಲ್ಲಿ ಸೆಕೆಂಡ್ ಪ್ಲೇಸ್ ಬಂದಿದೆ. ಸಿಲ್ವರ್ ಮೆಡಲ್ ಬಂದಿದೆ. ಆಕೆ ಇಲ್ಲಿಂದ ಅಲ್ಲಿಗೆ ಹೋಗಲಿಕ್ಕೆ 60 ಸಾವಿರ ರೂಪಾಯಿ ಖರ್ಚಾಗಿರುವಂತಹ ಸಂದರ್ಭದಲ್ಲಿ ಕರ್ನಾಟಕದಿಂದ 30 ಸಾವಿರ ರೂಪಾಯಿ ಸಂಗ್ರಹವಾಯಿತು. ವಾಪಸ್ಸು ಬಂದಳು, 30 ಸಾವಿರ ಸಾಲ ತೆಗೆದುಕೊಂಡು ಹೋಗಿದ್ದಳು. ವಾಪಸ್ಸು ಬಂದ ನಂತರ ಆವೊಂದು ಬೆಳ್ಳಿ ಪದಕ ಅಡವಿಟ್ಟಿರುವುದು ಅದು ಆಕೆಯ ಕೈಗೆ ಸಿಕ್ಕಿಲ್ಲ. ನ್ಯಾಯವಾಗಿ ಕರ್ನಾಟಕ ರಾಜ್ಯವೇ ಪೂರ್ಣ ಹಣವನ್ನು ಈ ವಿದ್ಯಾರ್ಥಿನಿಗೆ ಕೊಡಬೇಕಾಗಿತ್ತು. ಹೋಗುವುದಕ್ಕೆ ಬರುವುದಕ್ಕೆ ಎಲ್ಲ. ಯಾವ ರೀತಿ ನಮ್ಮ ಮುಖ್ಯಮಂತ್ರಿಗಳು ಅನಿಲ್‌ಕುಂಬ್ಳೆಯವರಿಗೆ ಒಂದು ಲಕ್ಷ ರೂಪಾಯಿ ಕೊಟ್ಟು ಅಭಿನಂದನೆಯನ್ನು ಸಲ್ಲಿಸಿ ಕರ್ನಾಟಕ ರಾಜ್ಯದ ಕೀರ್ತಿಪತಾಕೆಯನ್ನು ವಿಶ್ವದಲ್ಲಿ ಎತ್ತುವುದಕ್ಕೆ ಅವಕಾಶ ಮಾಡಿಕೊಟ್ಟರೋ ಅವರಿಗೆ ಬೆನ್ನುಚಪ್ಪರಿಸಿದರೋ ಅದೇ ರೀತಿ ವಿದ್ಯಾರ್ಥಿನಿ ಪುಷ್ಪಳಿಗೂ ಕೂಡ 1ಲಕ್ಷ ರೂಪಾಯಿ ಹಣವನ್ನು ಕೊಟ್ಟು ಅವಳಿಗೆ ಕರ್ನಾಟಕ ರಾಜ್ಯದ ಅಭಿನಂದನೆಯನ್ನು ಸಲ್ಲಿಸಿ ಮುಂದೆ ಇಡೀ ವಿಶ್ವದಲ್ಲಿ ಪ್ರಥಮ ಸ್ಥಾನ ಪಡೆಯುವುದಕ್ಕೆ ಬೆಂಬಲ ಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರದಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನಾನೂ ಮತ್ತು ಈಶ್ವರಪ್ಪನವರು ಮುಖ್ಯಮಂತ್ರಿಗಳಿಗೆ ಒಂದು ಮನವಿಯನ್ನು ಸಲ್ಲಿಸಿದ್ದೇವೆ. ಮುಖ್ಯಮಂತ್ರಿಗಳು ದಯವಿಟ್ಟು ಇದನ್ನು ಪರಿಶೀಲನೆ ಮಾಡಬೇಕು. ನಮ್ಮ ಕರ್ನಾಟಕ ರಾಜ್ಯಕ್ಕೆ ಬಹಳ ಗೌರವ ಬರತಕ್ಕ ವಿಚಾರ. ಈ ಬಗ್ಗೆ ಮುಖ್ಯಮಂತ್ರಿಗಳು ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಪ್ರಮೀಳ ನೇಸರ್ಗಿ : ಒಬ್ಬ ವಿದ್ಯಾರ್ಥಿನಿ ತನ್ನ ಸ್ವಂತ ಖರ್ಚಿನಲ್ಲಿ ಬಾಂಕಾಕ್‌ಗೆ ಹೋಗಿ 60 ಸಾವಿರ ರೂಪಾಯಿ ಖರ್ಚು ಮಾಡಬೇಕಾದರೆ ಅಲ್ಲಿ ಇಲ್ಲಿ ಸಾಲ ತೆಗೆದುಕೊಂಡು ಹೋಗಿರುತ್ತಾರೆ. ಸರ್ಕಾರ ಇದರ ಬಗ್ಗೆ ಆಸಕ್ತಿ ವಹಿಸಿ ಹಣವನ್ನು ಪೂರ್ತಿ ಕೊಡಬೇಕಾಗಿತ್ತು. ಕೊಡಲಿಲ್ಲ ಹೋಗಲಿ, ಈಗ ಮೆಡಲ್ ತಂದಿದ್ದಾರೆ. ಮೆಡಲನ್ನು ಇಟ್ಟುಕೊಂಡಿದ್ದಾರೆ ಆಕೆ ಇನ್ನು ಪೂರ್ತಿ ಹಣ ಕೊಟ್ಟಿಲ್ಲವೆಂದು ಸಿಲ್ವರ್ ಮೆಡಲ್ ಇಟ್ಟುಕೊಂಡಿದ್ದಾರೆ. ನಾನು ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳಲ್ಲಿ

ಕೇಳಿಕೊಳ್ಳುತ್ತಿದ್ದೇನೆ. ಆ ಹಣ ಪೂರ್ತಿ ಕೊಡಬೇಕು ಆ ಮೆಡಲನ್ನು ಅವಳಿಗೆ ಬರುವ ಹಾಗೆ ಮಾಡಬೇಕು. ಮೇಲಾಗಿ ಇಷ್ಟು ಕೀರ್ತಿ ತಂದಿರತಕ್ಕ ಒಬ್ಬ ವಿದ್ಯಾರ್ಥಿನಿಗೆ 1 ಲಕ್ಷ ರೂಪಾಯಿ ಅನುದಾನ ತಾವು ಕೊಡಬೇಕೆಂದು ತಮ್ಮ ಮುಖಾಂತರ ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್(ಮುಖ್ಯಮಂತ್ರಿ) : ಮಾನ್ಯ ಅಧ್ಯಕ್ಷರೆ, ಕ್ರೀಡಾಪಟುಗಳಿಗೆ ನಾವು ಉತ್ತೇಜನ ಕೊಡಬೇಕೆನ್ನುವುದರಲ್ಲಿ ಏನೂ ಅನುಮಾನವೇ ಇಲ್ಲ. ಆದರೆ ಅವರು ಈ ದುಸ್ಥಿತಿಗೆ ಅವರು ಬಂದಿದ್ದಾರೆಂದು ನಮಗೆ ಯಾರಿಗೂ ಗೊತ್ತಿರಲಿಲ್ಲ. ಆರ್ಥಿಕವಾಗಿ ಏನು ಸಹಾಯ ಮಾಡಬೇಕೋ ಮಾಡೋಣ. ಒಂದು ಲಕ್ಷ ರೂಪಾಯಿ ಎಂದು ನಾನು ಈಗ ಹೇಳುವುದಿಲ್ಲ. 50 ಸಾವಿರದವರೆಗೆ ನಾನು ಆ ಡಿಪಾರ್ಟ್‌ಮೆಂಟ್ ಮುಖಾಂತರ ನಾನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಛೇರ್ಮನ್ : 50 ಸಾವಿರ ರೂಪಾಯಿ ತಾವು ಕೊಡುತ್ತೀರಿ, ಆಕೆ ಈಗ ಏನು ಮೆಡಲ್ ಅಡವಿಟ್ಟಿದ್ದಾಳೆ ಅದನ್ನು ಬಿಡಿಸಿಕೊಡತಕ್ಕ ವ್ಯವಸ್ಥೆಯಾಗಬೇಕು.

ಶ್ರೀ ಸಿ. ಬೈರೇಗೌಡ : ಕಿಕ್‌ಬ್ಯಾಕ್ ಆ ಆಟನೇ ನಾವು ಕೇಳಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ : ಮಹಿಳೆಯರ ಕರಾಟೆ ಅದು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಎಕ್ಸಿಮ್ ಪಾಲಿಸಿಯ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ನಾಲ್ಕು ದಿವಸಗಳ ಹಿಂದೆ ಕೇಂದ್ರಸರ್ಕಾರದಲ್ಲಿ ಆಮದು ಮತ್ತು ರಫ್ತು ನೀತಿಯಿಂದ.....

ಛೇರ್ಮನ್ : ಶೂನ್ಯ ವೇಳೆಯಲ್ಲಿ ತಮ್ಮ ಹೆಸರು ಇಲ್ಲ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಬಿಲ್ ಪಾಸಾದ ತಕ್ಷಣ ನೀವು ಮಾತನಾಡಿಯೆಂದು ಅಧ್ಯಕ್ಷರು ಹೇಳಿದ್ದರು.

ಛೇರ್ಮನ್ : ತಮಗೆ ಅವಕಾಶ ಕೊಡೋಣ. ಶೂನ್ಯ ವೇಳೆಗೆ ಕೆಲವರ ಹೆಸರು ಇವೆ. ಅದು ಮುಗಿಯಲಿ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಬೆಳಿಗ್ಗೆಯಿಂದ ಆ ವಿಷಯಕ್ಕೆ ನಾನು ಕಾಯ್ದು ಕೊಂಡಿದ್ದೇನೆ.

ಛೇರ್ಮನ್ : ಎಲ್ಲರೂ ಶೂನ್ಯ ವೇಳೆಯಲ್ಲಿ ಮಾತನಾಡಬೇಕೆಂದು ಬೆಳಿಗ್ಗೆಯಿಂದ ಕುಳಿತಿದ್ದಾರೆ.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಇದು ರೈತರ ಪರಿಸ್ಥಿತಿ. ರೈತರ ಆತ್ಮಹತ್ಯೆಗೂ ಇದಕ್ಕೂ ಬಹಳ ಸಂಬಂಧವಿದೆ. ಇವತ್ತು ರೈತರು ಉಳಿದುಕೊಳ್ಳುವ ಪ್ರಶ್ನೆನೇ ಇಲ್ಲ. ಇದು ಬಹಳ ಮುಖ್ಯವಾದ ವಿಷಯ ತಾವು ದಯವಿಟ್ಟು ಅವಕಾಶ ಕೊಡಬೇಕು.

ಛೇರ್ಮನ್ : ಇದು ಮುಗಿಯಲಿ ಆಮೇಲೆ ತೆಗೆದುಕೊಳ್ಳೋಣ. ಅಧ್ಯಕ್ಷರು ಅಪ್ಪಣೆ ಕೊಡಿಸಿದ್ದಾರೆ ಇವತ್ತು ಕಡೆಯ ದಿವಸ ಎಷ್ಟು ಹೊತ್ತಾದರೂ ಇದೆಲ್ಲ ಮುಗಿಯಬೇಕು. ಇವರ ಹೆಸರು ಇದೆ ಇದು ಆಗಲಿ. ಆಮೇಲೆ ನಿಮ್ಮದು ತೆಗೆದುಕೊಳ್ಳೋಣ. ಅವರದು ಆದ ಮೇಲೆ ನಿಮಗೆ ಅವಕಾಶ ಕೊಡುತ್ತೇನೆ. ಏಕೆಂದರೆ ಅವರದು ಆದ ಮೇಲೆ ನನ್ನ ಹೆಸರು ಇದೆ. ಈಗ ನಾನು ಮಾತನಾಡುವಹಾಗೆ ಇಲ್ಲ.